1.	ಎನ್‌ಎಲ್‌ಸಿ ಹಂತ-1 (ವಿಸ್ತರಣೆ)	100	ಮೆ.ವ್ಯಾ
2.	ತಾಲ್ಚರ್ ಹಂತ-2	396	"
3.	ಎನಎಲಸಿ ಹಂತ-2 (ವಿಸ್ತರಣೆ)	100	"
4.	ರಾಮಗುಂಡಂ ಹಂತ-3	87	"
5.	ಕೈಗಾ ಹಂತ-3 ಮತ್ತು 4	108	"

ಪ್ರಸರಣ ಮತ್ತು ಒತರಣ ನಷ್ಟಗಳನ್ನು ಇಳಿಸಲು ಹೆಚ್ಚು ಒತ್ತು ನೀಡಲಾಗುತ್ತಿದೆ.

ಕಛೇರಿ ಸಮಯದಲ್ಲಿ 284-B ಬಸನ್ನು ಎಕ್ಸ್‌ಪ್ರೆಸ್ ರೂಪದಲ್ಲಿ ಓಡಿಸುವುದು.

156(349) ಶ್ರೀ ನಾರಾಯಣಸ್ವಾಮಿ ಸ್ವಾಮಿ(ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಯಲಹಂಕ ಉಪನಗರದ ಪುಟ್ಟೇನಹಳ್ಳಿಯಿಂದ ಬೆಳಗ್ಗೆ 9.15ಕ್ಕೆ ಹೊರಡುವ ಪಿ.ಹೆಚ್.ಎಸ್ ಬಸ್(ತಡೆರಹಿತ) ಎಕ್ಸ್‌ಪ್ರೆಸ್ ಸಂಚಾರ ನಿರ್ವಹಿಸುತ್ತಿರುವುದು ನಿಜವೇ;

ಆ. 284-ಬಿ ನಂಬರಿನ ಬಸ್ಸು ಬೆಳಗ್ಗೆ 9.30ಕ್ಕೆ ಎಲ್ಲಾ ಕಡೆ ನಿಲಗಡೆ ನೀಡಿ ವಿಧಾನಸೌಧದ ಮೂಲಕ ಶಿವಾಜಿನಗರಕ್ಕೆ ಕಛೇರಿ ಸಮಯದಲ್ಲಿ ಸಂಚರಿಸುತ್ತಿರುವುದು ನಿಜವಲ್ಲವೇ?

ಇ. ಸರ್ಕಾರದ ಕಛೇರಿಗಳಲ್ಲಿ ಪಂಚಿಂಗ್ ವ್ಯವಸ್ಥೆ ಅಳವಡಿಸಿರುವ ಕಾರಣ ಮೇಲಿನ ಬಸ್ಸು ಪುಟ್ಟೇನಹಳ್ಳಿಯಿಂದ ಹೊರಟು ಕಛೇರಿ ತಲುಪಲು ವಿಳಂಬವಾಗುತ್ತಿರುವುದರಿಂದ ಎಕ್ಸ್‌ಪ್ರೆಸ್ ಬಸ್ಸಾಗಿ ಪರಿವರ್ತಿಸಿ ಬೆಳಗ್ಗೆ 09.15ಕ್ಕೆ ಬಸ್ಸನ್ನು ಸಾಮಾನ್ಯವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಲು ಪರೀಶೀಲಸಾಗುವುದೇ;

ಈ. ಅದೇ ರೀತಿ ಸಾಯಂಕಾಲ ಕಛೇರಿ ಸಮಯದಲ್ಲಿ ವಿಧಾನಸೌಧದಿಂದ ಹೊರಡುವ 402ಡಿ ಬಸ್ ಪ್ರಾರಂಭದಲ್ಲಿಯೇ ಭರ್ತಿ ಆಗುತ್ತಿದ್ದು ಎಕ್ಸ್‌ಪ್ರೆಸ್ ರೂಪದಲ್ಲಿ ಓಡಿಸಲು ಕ್ರಮ ವಹಿಸಲಾಗುವುದೇ?

ಶ್ರೀ.ಬಿ.ರಮಾನಾಥ್‌ರೈ (ಸಾರಿಗೆ ಸಚಿವರು)

ಅ. ಹೌದು.

ಆ. ಹೌದು.

ಇ. ಬೆಳ್ಳಗೆ 9.15ಕ್ಕೆ ಪುಟ್ಟೇನಹಳ್ಳಿಯಿಂದ ಕಂಪೇಗೌಡ ಬಸ್ ನಿಲ್ದಾಣಕ್ಕೆ ಆಚರಣೆಯಾಗುತ್ತಿರುವ 284-ಡಿ ವಾಹನವನ್ನು ನಿಯಮಿತ ನಿಲಗಡೆಯೊಂದಿಗೆ ವೇಗಧೂತ ವಾಹನವನ್ನಾಗಿ ಕಛೇರಿಗಳಿಗೆ ಹೋಗುವ ಪ್ರಯಾಣಿಕರ ಅನುಕೂಲಕ್ಕಾಗಿ ಆಚರಣೆ ಮಾಡಲಾಗುತ್ತಿದೆ. ಬೆಳಗ್ಗೆ 9.30ಕ್ಕೆ ಪುಟ್ಟೇನಹಳ್ಳಿಯಿಂದ ಶಿವಾಜಿನಗರಕ್ಕೆ 284-ಬಿ ಮಾರ್ಗದಲ್ಲಿ ಸಾಮಾನ್ಯ ಸುತ್ತುವಳಿಯಲ್ಲಿ ಎಲ್ಲಾ ನಿಲುಗಡೆಗಳನ್ನು ನೀಡಿ ಆಚರಣೆಗೊಳಿಸಲಾಗುತ್ತಿದೆ. ಸದರಿ ಸುತ್ತುವಳಿಗಳನ್ನು ವೇಗಧೂತ ಸುತ್ತು ವಳಿಯನ್ನಾಗಿ ಪರಿವರ್ತಿಸಿದರೆ, ಮಧ್ಯದ ನಿಲುಗಡೆಗಳಲ್ಲಿ ಈ ಮಾರ್ಗವನ್ನು ಆವಲಂಬಿಸಿರುವ ಪ್ರಯಾಣಿಕರಿಗೆ ತೀರಾ ಅನಾನುಕೂಲ ಉಂಟಾಗುತ್ತದೆ.

ಈ. ವಿಧಾನಸೌಧದಿಂದ ಹೊರಡುವ 402-ಡಿ ಬಸ್ಸು ವಿಧಾನಸೌಧ ಸುತ್ತಮುತ್ತಲಿನ ಸರ್ಕಾರಿ ಕಛೇರಿ ಸಿಬ್ಬಂದಿಗೆ ಅನುಕೂಲವಾಗುವಂತೆ ಕಾರ್ಯಚರಣೆಗೊಳಿಸಲಾಗುತ್ತಿದೆ. ಈ ಬಸ್ಸನ್ನು

ಎಕ್ಸ್‌ಪ್ರೆಸ್‌ನಂತೆ ಅಂದರೆ ನಿಯಮಿತ ನಿಲುಗಡೆಗಳನ್ನು ನೀಡಿದರೆ, ಉಳಿದ ನಿಲುಗಡೆಗಳಲ್ಲಿ ಈ ಬಸ್ಸನ್ನು ಅವಲಂಬಿಸಿರುವ ಇತರ ಪ್ರಯಾಣಿಕರಿಗೆ ಅನಾನುಕೂಲವಾಗಿ ದೂರುಗಳಿಗೆ ಅವಕಾಶವಿರುತ್ತದೆ.

ಬೆಂಗಳೂರಿನ ಕುಂಬಾರದ ಸಂಘಕ್ಕೆ ನಿವೇಶನ ಮಂಜೂರು

158 (389) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) - ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಬೆಂಗಳೂರು ನಗರದ ಕಲಾಸಿಪಾಳ್ಯಂನಲ್ಲಿರುವ ಜಾಗವನ್ನು ಕುಂಬಾರರ ಸಂಘಕ್ಕೆ ಮಂಜೂರು ಮಾಡಿರುವುದು ನಿಜವೇ; ಯಾವಾಗ ಮಂಜೂರು ಮಾಡಲಾಯಿತು;

ಆ) ಸದರಿ ನಿವೇಶನವನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ? (ನಿವೇಶನವನ್ನು ಕೋರಿ ಬರೆದ ಮನವಿ ಪತ್ರದ ಪ್ರತಿ ಹಾಗೂ ಮಂಜೂರಾತಿ ನೀಡಿದ ಪಾಲಿಕೆಯ ಪತ್ರದ ಪ್ರತಿಗಳನ್ನು ವಿವರಗಳೊಂದಿಗೆ ಲಗತ್ತಿಸಿ ತಿಳಿಸುವುದು)

ಇ) ನಿವೇಶನವನ್ನು ರಾಜ್ಯ ಕುಂಬಾರರ ಸರ್ವಾಂಗೀಣ ಅಭಿವೃದ್ಧಿ ಸಲುವಾಗಿ ನೀಡಿರುವಂತಹದ್ದೇ? ಅಥವಾ ಬೆಂಗಳೂರು ನಗರದ ಕುಂಬಾರರ ಹಿತದೃಷ್ಟಿಯಿಂದ ನೀಡಿರುವುದೇ? ವಿವರ ನೀಡುವುದು;

ಈ) ರಾಜ್ಯ ಮಟ್ಟದ ಸಂಘದ ಸಲುವಾಗಿ ನಿವೇಶನ ಮಂಜೂರು ಮಾಡಿದ್ದಲ್ಲಿ ಹಾಲಿ ಚುನಾಯಿತ ಆಡಳಿತ ಮಂಡಳಿಗಳು ಸಂಘವನ್ನು ಬೆಂಗಳೂರು ನಗರಕ್ಕೆ ಮಾತ್ರ (ಜಿಲ್ಲೆ) ಸೀಮಿತ ಮಾಡಿಕೊಂಡಿರುವುದೇ; ಮಾಡಿಕೊಂಡಿದ್ದಲ್ಲಿ, ಅದು ಅಕ್ರಮವಲ್ಲವೇ?

ಉ) ಈ ನಿಟ್ಟಿನಲ್ಲಿ ಯಾವ ಕ್ರಮವನ್ನು ಸರ್ಕಾರ ಕೈಗೊಳ್ಳುವುದು? ಇದಕ್ಕಾಗಿ ಆಡಳಿತಾಧಿಕಾರಿ ನೇಮಕ ಮಾಡಿ ವಿಚಾರಣೆಗೊಳಪಡಿಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಹೌದು.

ಸರ್ಕಾರಿ ಆದೇಶ ಸಂ. ಹೆಚ್‌ಎಂಎ 162 ಎಂಎನ್‌ಜಿ 72, ದಿನಾಂಕ 19.2.1974ರ ಮೂಲಕ ಮಂಜೂರು ಮಾಡಿದೆ.

ಆ) ಸದರಿ ನಿವೇಶನವನ್ನು ಕುಂಬಾರರ ಜನಾಂಗದ ವಸತಿ ನಿಲಯವನ್ನು ಕಟ್ಟುವ ಸಲುವಾಗಿ ಮಂಜೂರು ಮಾಡಲಾಗಿದೆ. ಮನವಿ ಪತ್ರದ ಪ್ರತಿ ಹಾಗೂ ಪಾಲಿಕೆಯ ಮಂಜೂರಾತಿ ಪತ್ರದ ಪ್ರತಿಗಳನ್ನು ಲಗತ್ತಿಸಿದೆ.

ಇ) ನಿವೇಶನವನ್ನು ರಾಜ್ಯ ಕುಂಬಾರರ ಸಂಘಕ್ಕೆ ಕುಂಬಾರರ ಸಂಘ ವಸತಿ ನಿಲಯವನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಿದೆ.

ಈ)ಉ) ಸಂಘದ ಮೇಲಿನ ದೂರುಗಳ ಕುರಿತು ಈಗಾಗಲೇ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25ರ ಪ್ರಕಾರ ವಿಚಾರಣೆಗೆ ದಿನಾಂಕ 28.9.2002 ರಲ್ಲಿ ಆದೇಶಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿ ಇದೆ. ವಿಚಾರಣಾ ವರದಿ ಸ್ವೀಕೃತಿ ನಂತರ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.